SRI N. HUCHAMASTHY GOWDA (Minister for Revenue).—

(*a*) 8 persons. Yes.

(*b*) 8 persons.

(*c*) 2 persons.

(*d*) The G. O. No. FD 23-SRS 60, dated 1-3-1960 will not apply for adding the previous service to the service rendered as Village Accountants who have retired from service.

(*e*) The proposals for sanctioning annual increments in terms of letter No. RD 208 MVS 75, dated 30-11-1976 have been received at the district level.

At present a proposal has been received for sanction from Kolar District.

(*f*) Village Accountants who have put in less than 10 years service are not eligible to get pension according to K. C. S. Rs.

2 persons.

(*g*) Those who have put in qualifying service will be paid the pension according to K. C. S. Rs.

Taking up some pending Questions

ಶ್ರೀ ಸಿ. ಬೈರೇಗೌಡ.—ಕೇಸರಿಬೇಳೆ ವಿಚಾರದಲ್ಲಿ ನಾನು ಕಳೆದ ಎರಡು ಮೂರು ಅಧಿವೇಶನ ದಿಂದಲೂ ಒಂದು ಪ್ರಶ್ನೆಯನ್ನು ರಿನ್ಯೂ ಮಾಡಿಕೊಂಡು ಬಂದಿದ್ದೇನೆ. ಆದರೆ ಅದಕ್ಕೆ ಸರ್ಕಾರದಿಂದ ಇನ್ನೂ ಉತ್ತರ ಬಂದಿಲ್ಲ. ಉದ್ದೇಶಪೂರ್ವಕವಾಗಿ ಉತ್ತರ ಕೊಡದೆ ನಮ್ಮ ಹಕ್ಕನ್ನು ಮೊಟಕು ಮಾಡು ತ್ತಿದ್ದಾರೆ.

ಅಧ್ಯಕ್ಷರು.—ತಾವು ನನ್ನ ಕಚೇರಿಗೆ ಬಂದು ನೋಡಿ, ನಾನು ಫೈಲ್ ತೆಗೆಸಿ ನೋಡಿಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ನಾನೂ ಸಹ ಒಂದು ಪ್ರಶ್ನೆಯನ್ನು ಕಳುಹಿಸಿದ್ದೆ, ಅದಕ್ಕೆ ಇನ್ನೂ ಉತ್ತರ ಬಂದಿಲ್ಲ.

ಅಧ್ಯಕ್ಷರು.—ನಿಮಗೂ ಅದೇ ಉತ್ತರ.

Calling Attention to matters of urgent Public Importance

(*i*) *re: necessity of holding elections to the Arsikere Town Municipal Council*

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಧ್ಯಕ್ಷಣಿಯವರೇ ನಾನು ಅರಸೀ ಕರೆ ಟೌನ್ ಪುರಸಭೆಗೆ ಚುನಾವಣೆಯನ್ನು ನಡೆಸುವ ಅಗತ್ಯತೆಯ ವಿಚಾರದ ಕಡೆಗೆ ಮಾನ್ಯ ನಗರಾಡಳಿತ ಹಾಗೂ ರಾಜಕೀಯ ವಿಶ್ರಾಂತಿವೇತನ ಮಂತ್ರಿಗಳ ಗಮನವನ್ನು ಸೆಳೆಯಂತ್ತೇನೆ.

SRI D. K. NAIKAR (Minister for Municipal Administration and Political Pension).—I wish to make the following statement:

The present elected Municipal council of Arsikere town was constituted in 1971 and its term expired in the month of January1975. The election could not be held after the expiry of the term since the territorial divisions was not formed and as such the period of elected council was extended for 6 months. In the meantime, the Karnataka Municipalities (Postponement of Elections) Act, 1975, was promulgated. According to the provisions of the Postponement of Elections Act, the elections did not take place during emergency. In the Postponement of Elections Act, provision is provided that the present Council should continue to hold office till new Council is validly constituted. There is no contravention of Section 18 of the Karnataka Municipalities Act, 1964 in continuing the present council. The proposal to supercede the Municipal Council on the ground that the present Council has not properly discharged the duties and has become incapable of discharging functions etc., has not been received by the Government so far. Action will be taken after examining the recommendations made by the Deputy Commissioner and Divisional Commissioner. Efforts are being made to hold elections early to the Municipal Council.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಭಾಧ್ಯಕ್ಷಣಿಯವರೇ ಅರಸೀಕೆರೆಯ ಪುರಸಭೆಯ ಅವಧಿಯು ೧೯೭೫ನೇ ಇಸವಿ ಜನವರಿಯಲ್ಲಿ ಮುಕ್ತಾಯವಾಯಿತು. ಆಗ ತಾವು ೬ ತಿಂಗಳಂ ಆ ಪುರ ಸಭೆಯ ಅವಧಿಯನ್ನು ಎಕ್ಸ್‌ಟೆಂಡ್ ಮಾಡಿದ್ದೀರಿ, ಅದನ್ನು ಯಾವ ಕಾನೂನಿನ ಚೌಕಟ್ಟಿನಲ್ಲಿ ಎಕ್ಸ್‌ಟೆಂಡ್ ಮಾಡಿದ್ದೀರಿ?

ಶ್ರೀ ಡಿ. ಕೆ. ನಾಯ್ಕರ್.—ಮುನಿಸಿಪಾಲಿಟಿ ಆಕ್ಟ್‌ನಲ್ಲಿ ಒಂದು ವರ್ಷ ಎಕ್ಸ್‌ಟೆನ್‌ಷನ್ ಕೊಡುವ ಅಧಿಕಾರ ಇದೆ. ಆದ್ದರಿಂದ ಆದರ ಪ್ರಕಾರ ಕೊಟ್ಟಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ —ದಯವಿಟ್ಟು ಆ ಆಕ್ಟ್‌ನ್ನು ಓದಿ

ಶ್ರೀ ಡಿ. ಕೆ. ನಾಯ್ಕರ್.—ಸರ್ಕಾರದ ಕಾನೂನು ರೀತ್ಯಾ ಮಾಡಲಾಗಿದೆ.

ಶ್ರೀ ಎಚ್. ಡಿ. ದೇವೇಗೌಡ —೧೯೭೪ನೇ ಇಸವಿಯ ಮುನಿಸಿಪಾಲಿಟಿಯ ಆಕ್ಟ್‌ನಲ್ಲಿ ಒಂದು ವರ್ಷ ಮುನಿಸಿಪಾಲಿಟಿಯಂ ಅವಧಿಯನ್ನು ಒಂದು ವರ್ಷ ಎಕ್ಸ್‌ಟೆನ್‌ಷನ್ ಕೊಡುವ ಅಧಿಕಾರ ನನಗೆ ಗೊತ್ತಿರುವ ಹಾಗೆ ಇಲ್ಲ ಎಂದು ಕಾಣುತ್ತದೆ.

ಶ್ರೀ ಡಿ. ಕೆ. ನಾಯ್ಕರ್.—ಆ ರೀತಿ ಕಾನೂನು ಇದ್ದರೆ ನಾವು ಮಾಡುತ್ತೇವೆ. ಇಲ್ಲದಿದ್ದರೆ ನಾನು ಆ ರೀತಿ ಟರ್ಮ್ ಎಕ್ಸ್‌ಟೆಂಡ್ ಮಾಡುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಯಾವ ಪ್ರಾವಿಜನ್ ಪ್ರಕಾರ ಎಕ್ಸ್‌ಟೆಂಡ್ ಮಾಡಿದ್ದೀರಿ ಎಂಬುದನ್ನು ಹೇಳಿ?

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಸುಮ್ಮನೆ ಉಡಾಫೆ ಹೊಡೆದರೆ ಪ್ರಯೋಜನ ಇಲ್ಲ. ನಾವು ಅದನ್ನು ಸಹಿಸುವುದಕ್ಕೆ ಆಗುವುದಿಲ್ಲ. ದಯವಿಟ್ಟು ಆ ಆಕ್ಟಿನ ರಿಲವೆಂಟ್ ಪೋರ್ಷನ್ ಓದಿ.

ಶ್ರೀ ಡಿ. ಕೆ. ನಾಯಕರ್.—೧೯೭೪ನೇ ಇಸವಿಯ ಆಕ್ಟಿಗೆ ೧೯೭೬ನೇ ಇಸವಿಯಲ್ಲಿ ತಿದ್ದುಪಡಿ ಆಗಿದೆ ಆದರ ಪ್ರಕಾರ ಆ ಪುರಸಭೆಗೆ ೬ ತಿಂಗಳ ಎಕ್ಸ್‌ಟೆಂಪನ್ ಕೊಟ್ಟಿದ್ದೇವೆ.

SRI H. D. DEVEGOWDA.—I am sorry for this type of attitude I am requesting the Minister that he should refer to 1964 Act. May I know whether under that Act there is provision for the Government to extend the term of the municipality by one more year?

ಶ್ರೀ ಡಿ. ಕೆ. ನಾಯ್ಕರ್.—ಶ್ರೀಮಾನ್ ದೇವೇಗೌಡರು ಈ ರೀತಿ ಕೋಪ ಮಾಡಿಕೊಂಡರೆ ಹೇಗೆ? ಆಕ್ಟ್ ಮತ್ತು ರೂಲ್ಸ್ ಪ್ರತಿಯೊಬ್ಬ ಸದಸ್ಯರಿಗೂ ಗೊತ್ತಿದೆ ಎಂದು ನನ್ನ ಭಾವನೆ. ಆದ್ದರಿಂದ ಆ ಪುರ ಸಭೆಯ ಅವಧಿಯು ಮುಂದುವರಿಯಬೇಕಾದರೆ ಕಾನೂನು ರೀತಿ ಎಕ್ಸ್‌ಟೆನ್‌ಷನ್ ಕೊಟ್ಟಿದ್ದೇವೆ ಎಂದು ಹೇಳಿದ್ದೇನೆ. ಮಾನ್ಯ ಸದಸ್ಯರು ಆದಕ್ಕೆ ಪ್ರಾವಿಜನ್ ಇಲ್ಲ ಎಂದು ಹೇಳುವುದಾದರೆ ಅವರಿಗೆ ಆ ಪ್ರಾವಿಜನ್ ಅನ್ನು ಆಮೇಲೆ ತೋರಿಸುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮುನಿಸಿಪಾಲಿಟಿಗಳ ಟರ್ಮ್ ಅನ್ನು ಎಕ್ಸ್‌ಟೆಂಡ್ ಮಾಡುವ ಬಗ್ಗೆ ಎಲೆಕ್ಷನ್ ಪೋಸ್ಟ್‌ಪೋನ್ ಮಾಡುವ ಬಗ್ಗೆ ೧೯೭೫ನೇ ಇಸವಿಯ ಆಗಸ್ಟ್ ತಿಂಗಳಲ್ಲಿ ತಿದ್ದುಪಡಿ ಬಂದು ಪಾಸಾಯಿತು. ಆದರೆ ಈ ಅರಸೀಕೆರೆಯ ಪುರಸಭೆಯ ಅವಧಿಯನ್ನು ೧೯೭೫ನೇ ಜನವರಿ ತಿಂಗಳಲ್ಲಿ ೬ ತಿಂಗಳು ಎಕ್ಸ್‌ಟೆಂಡ್ ಮಾಡಿದ್ದೀರಿ? ಇದನ್ನು ಯಾವ ಆಕ್ಟಿನ ಪ್ರಕಾರ ಎಕ್ಸ್‌ಟೆಂಡ್ ಮಾಡಿದ್ದೀರಿ, ಯಾವ ಸೆಕ್ಷನ್ ಪ್ರಕಾರ ಎಕ್ಸ್‌ಟೆಂಡ್ ಮಾಡಿದ್ದೀರಿ? ನಾನು ತಾಳ್ಮೆಯಿಂದಲೇ ಕೇಳುತ್ತಿದ್ದೇನೆ. ದಯಮಾಡಿ ಉತ್ತರ ಕೊಡಬೇಕು.

ಶ್ರೀ ಡಿ. ಕೆ. ನಾಯ್ಕರ್.—೧೯೭೫ನೇ ಜನವರಿ ತಿಂಗಳಿಗೆ ಅರಸೀಕೆರೆಯ ಪುರಸಭೆಯ ಟರ್ಮ್ ಮುಂಕ್ತಾಯವಾಯಿತು. ೬ ತಿಂಗಳಲ್ಲಿ ಟೆರಿಟೋರಿಯಲ್ ಡಿವಿಜನ್ ಮಾಡುವುದಕ್ಕೆ ಆಗಲಿಲ್ಲ. ಆಗ ೨೧-೭-೧೯೭೫ಕ್ಕೆ ಮತ್ತೆ ಟರ್ಮ್ ಎಕ್ಸ್‌ಪೈರ್ ಆಗುವಂಥಾದ್ದು ಆಯಿತು. ಆದ್ದರಿಂದ ೨೧-೭-೧೯೭೫ ರಿಂದ ಪೋಸ್ಟ್‌ಪೋನ್‌ಮೆಂಟ್ ಆಫ್ ಎಲೆಕ್ಷನ್ ಆಕ್ಟ್ ಜಾರಿಗೆ ಬಂತು. ಈ ಆಕ್ಟ್ ಕೆಳಗೆ ಎಲೆಕ್ಷನ್ ಮುಂದಕ್ಕೆ ಹೋಯಿತು.

ಶ್ರೀ ಎಚ್. ಡಿ. ದೇವೇಗೌಡ.—ನಿರ್ದಿಷ್ಟವಾಗಿ ದಯಮಾಡಿ ಉತ್ತರ ಕೊಡಬೇಕಾಗುತ್ತದೆ. ಯಾವ ಕಾನೂನಿನ ಚೌಕಟ್ಟಿನಲ್ಲಿ ೬ ತಿಂಗಳ ಅವಧಿಯನ್ನು ಎಕ್ಸ್‌ಟೆಂಡ್ ಮಾಡಿದ್ದೀರಿ? ಇದಕ್ಕೆ ಕಾಯಿದೆಯೊಳಗೆ ಏನಾದರೂ ಅವಕಾಶ ಇದೆಯೆ? ಇದ್ದರೆ ಯಾವ ಆಕ್ಟ್, ಯಾವ ಸೆಕ್ಷನ್‌ನಲ್ಲಿ ಅವಕಾಶ ಇದೆ ಎಂಬುದನ್ನು ಪೂರ್ಣವಾಗಿ ಈ ಮಾನ್ಯ ಸಭೆಗೆ ತಿಳಿಸಬೇಕು.

ಶ್ರೀ ಡಿ. ಕೆ. ನಾಯ್ಕರ್.—ಅದು ನನ್ನ ಫೈಲಿನಲ್ಲಿ ಇದೆ. ಈಗ ಆ ಫೈಲು ನನ್ನಲ್ಲಿ ಇಲ್ಲ. ಬೇಕಾದರೆ ಅದನ್ನು ಆ ಮೇಲೆ ಕೊಡುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಹಾಗಾದರೆ ನಾನು ಇದನ್ನು ಮುಂದಕ್ಕೆ ಬಿಡುವುದಿಲ್ಲ

ಅಧ್ಯಕ್ಷರು.—ಮಾನ್ಯ ಸದಸ್ಯರು ಆ ರೀತಿ ಹೆದರಿಸುವುದಕ್ಕಾಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಯಾವ ಕಾನೂನಿನ ಚೌಕಟ್ಟಿನ ಪ್ರಕಾರ ೬ ತಿಂಗಳ ಅವಧಿಯನ್ನು ಹೆಚ್ಚಿಸಿದ್ದಾರೆ? ಇವರು ಮನಸ್ಸಿಗೆ ಬಂದಹಾಗೆ ನಡೆಸುವುದಕ್ಕೆ ಇದೇನು ಮಂಕಮಾದ್ ಬಿನ್ ತೊಗಲಕ್‌ನ ದರ್ಬಾರೇ?

ಶ್ರೀ ಡಿ. ಕೆ. ನಾಯ್ಕರ್.—ಮುನಿಸಿಪಾಲಿಟಿ ಆಕ್ಟಿನ ೧೮ನೇ ಪ್ರಾವಿಜನ್‌ನಲ್ಲಿ ಈ ರೀತಿ ಹೇಳಿದ್ದಾರೆ: The term of office the Councillors provided that the Government may by notification extend for the reasons to be specified in the notification the term of office of the councillors for such period or periods as it deems fit the total pariod so extended shall not exceed one year' ಎಂದು ಇದೆ.

ಶ್ರೀ ಎಚ್. ಡಿ. ದೇವೇಗೌಡ —ಈಗ ಮುನಿಸಿಪಾಲಿಟಿಗಳಲ್ಲಿ ಪ್ರೆಸಿಡೆಂಟ್ ಎಲೆಕ್ಷ್ ಮಾಡುವುದಕ್ಕೆ ಒಂದು ವರ್ಷದ ಲಿಮಿಟ್ ಮಾಡಿಕೊಂಡಿದ್ದಾರೆ ಕಾರ್ಪೊರೇಷನ್‌ಗಳಲ್ಲಿ ಮೇಯರ್ ಎಲೆಕ್ಟ್ ಮಾಡುವುದಕ್ಕೆ ಒಂದು ವರ್ಷ ಲಿಮಿಟ್ ಇಟ್ಟುಕೊಂಡಿದ್ದಾರೆ. ಕೆಲವು ಕಡೆ ೪ ವರ್ಷ ಲಿಮಿಟ್ ಮಾಡಿಕೊಂಡಿದ್ದಾರೆ. ಕೆಲವು ಕಡೆ ೨ ವರ್ಷಕ್ಕೆ ಒಂದು ಸಾರಿ ಪ್ರೆಸಿಡೆಂಟ್ ಎಲೆಕ್ಷನ್ ಮಾಡುತ್ತಾರೆ. ಈಗ ಯಾವುದನ್ನೋ ಹೇಳುತ್ತಿದಾರೆ. ಅದಕ್ಕೂ ಇದಕ್ಕೂ ಸಂಬಂಧ ಇಲ್ಲ. ಇದನ್ನು ಹೇಳುವುದಕ್ಕೆ ಹೋಗಬೇಡಿ.

ಶ್ರೀ ಡಿ. ಕೆ. ನಾಯ್ಕರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಇಂಟರ್‌ಪ್ರಿಟೇಷನ್ ಇದು, ನನ್ನದು ಇದು. ಮಾನ್ಯ ದೇವೇಗೌಡರು ಕೇಳಿದ್ದಕ್ಕೆ ಹೇಳುತ್ತೇನೆ, The term of office of the councillors generally is four years· ಜನರಲೀ ೪ ವರ್ಷ ಆದಮೇಲೆ ಮುಂಗಿಯಂತ್ತದೆ ಎಂದೂ ಇದೆ. Not exceeding one year ಎಂದು ಇದೆ. ಇದರ ಪ್ರಕಾರ ಸರ್ಕಾರಕ್ಕೆ ಅಧಿಕಾರ ಇದೆ ಎಂದು ಆಯ್ತು. ಮಾನ್ಯ ಸದಸ್ಯರು ಇಲ್ಲ ಎನ್ನುವುದಾದರೆ ಅವರ ವಾದ ಬೇರೆ.

ಶ್ರೀ ಕೆ. ಎಚ್. ರಂಗನಾಥ್.—ನೋಟಿಫಿಕೇಷನ್, ರೂಲ್ಸ್, ಲಾ ಏನು ಗೊತ್ತಿದೆ ಅದನ್ನು ಕೇಳ ಬೇಕಾದಿಲ್ಲ ಎಂದು ಕಾನೂನು ಇದೆ. ಈ ತರಹ ಇಂಟರ್‌ಪ್ರಿಟೇಷನ್‌ನಿಂದ ವಾದವಿವಾದಕ್ಕೆ ಎಡೆಯಾಗುತ್ತದೆ. ಏನು ಮಾಡಿದ್ದೀರಿ ಎಂದೂ ಕೇಳುವುದಕ್ಕೆ ಬೇರೆ ಅವಕಾಶ ಇದೆ ಅದು ಇಲ್ಲಿ ಅಲ್ಲ.

SRI KAGODU THIMMAPPA.—There is one more lacuna in this notification...The Karnataka Municipalities Postponement of Elections Act 1975.

SRI K. H. PATIL.—Madam Speaker, the hon. the Leader of the Opposition and the Opposition members are fully aware of the provision under which we have done it. If they do not know it, I can understand. When they are fully aware and are guiding us, what is the use of eliciting information from the Hon'ble Minister?

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳಾದ ಶ್ರೀಮಾನ್ ಕೆ.ಎಚ್. ರಂಗನಾಥ್ ಅವರು ಒಂದು ಮಾತನ್ನು ಹೇಳಿದರು. ಒಂದೊವೇಳೆ ಇಂಟರ್‌ಪ್ರಿಟೇಷನ್‌ನಲ್ಲಿ ಹೆಚ್ಚು ಕಡಿಮೆ ಇದ್ದರೆ ಅದು ಇಲ್ಲಿ ಅಲ್ಲ, ಬೇರೆ ಕಡೆ ಹೋಗಿ ಎಂದು ಹೇಳಿದರು.

ಶ್ರೀ ಕೆ. ಎಚ್. ರಂಗನಾಥ್.—ನಾನು ಹೇಳಿದ್ದು ನೋಟಿಫಿಕೇಷನ್, ರೂಲ್ಸ್, ಲಾ ಏನಿದೆ ಇದರ ಬಗ್ಗೆ ಕಾನೂನಿನ ಪ್ರಕಾರ ಇಂಟರ್‌ಪ್ರಿಟೇಷನ್ ಹಾಕಬೇಕಾದ್ದಿಲ್ಲ, We presume to know everything though we have not read and know it, ಆದುದರಿಂದ ಕಾನೂನಿನ ವ್ಯಾಪ್ತಿಯಲ್ಲಿ ಕೇಳಿ ಎಂದೂ ಹೇಳಿದೆ.

ಶ್ರೀ ಎಚ್. ಡಿ. ದೇವೇಗೌಡ.—ಡೆಪ್ಯುಟಿ ಕಮಿಷನರ್ ಹಾಸನ, ಡಿವಿಜನಲ್ ಕಮಿಷನರ್ ಮೈಸೂರು ಇವರಿಬ್ಬರೂ ಎಲೆಕ್ಷನ್ ಹೋಲ್ಡ್ ಮಾಡಬೇಕು ಎಂದು ಬರೆದಿದ್ದಾರಲ್ಲ ಆ ರಿಪೋರ್ಟನ್ನ ದಯಮಾಡಿ ಓದಿ

ಶ್ರೀ ಡಿ. ಕೆ. ನಾಯ್ಕರ್.—ಎಲೆಕ್ಷನ್ ಹೋಲ್ಡ್ ಮಾಡಬೇಕು ಎಂದು ಅದರ ಅರ್ಥವಲ್ಲ. ಕೌನ್ಸಿಲ್ ಸದಸ್ಯರು ಆಲಿಗೇಷನ್ ಕೊಟ್ಟಿದ್ದಾರಲ್ಲ ಅಡ್ಮಿನಿಸ್ಟ್ರೇಷನ್ ಸರಿಯಾಗಿ ನಡೆಯುತ್ತಾ ಇಲ್ಲ ಎಂದೂ ಆ ಬಗ್ಗೆ ರೆಕಮಂಡೇಷನ್ ಕೊಟ್ಟಿದ್ದಾರೆ. ಸದಸ್ಯರು ಕೊಟ್ಟಿಂಥ ಆಲಿಗೇಷನ್ ಮೇಲೆ ರೆಕಮೆಂಡೇಷನ್ ಮಾಡಬೇಕು. ಆಮೇಲೆ ಕನ್ಸಿಡರ್ ಮಾಡುತ್ತೇನೆ ಎಂದೂ ಹೇಳಿದೆ.

ಶ್ರೀ ಎಚ್. ಡಿ. ದೇವೇಗೌಡ.—ಡೆಪ್ಯುಟಿ ಕಮಿಷನರ್ ರಿಪೋರ್ಟ್ ಕೊಟ್ಟಿದ್ದಾರಲ್ಲ ಅದನ್ನು ಸಭೆಯ ಮುಂದೆ ಓದಿ. Specific recommendation was sent by the Deputy Commissioner ಅದನ್ನು ಓದಿ.

ಶ್ರೀ ಕಾಗೋಡು ತಿಮ್ಮಪ್ಪ—ಟೈಮನ್ನು ಎಕ್ಸ್‌ಟೆಂಡ್ ಮಾಡಬೇಕಾದರೆ ಏನಾದರೂ ಮೆಟೀರಿಯಲ್ ಬೇಕು. ಡಿವಿಜನಲ್ ಕಮಿಷನರ್ ರೆಕಮೆಂಡೇಷನ್ ಮೇಲೆ ಮಾಡಬೇಕಾಗುತ್ತದೆ.

ಶ್ರೀ ಡಿ. ಕೆ ನಾಯ್ಕರ್.—ಮಾನ್ಯ ಸದಸ್ಯರ ಕಾಲಿಂಗ್ ಅಟೆನ್‌ಷನ್‌ನಲ್ಲಿ ಇರುವುದಕ್ಕೆ ನಾನು ಉತ್ತರ ಹೇಳಿದ್ದೇನೆ. ಅವರು ತಮ್ಮ ಕಾಲಿಂಗ್ ಅಟೆನ್‌ಷನ್‌ನಲ್ಲಿ ಈ ರೀತಿ ಹೇಳಿದ್ದಾರೆ.

> "The President of Municipal Council has failed in his duties towards the citizens of the Arasikere Town. He has failed to provide drinking water facility to the public in the town. Cholera epidemic has broken out in the town as a

result of failure to supply adequate and pure water. He has been indulging in the gross abuse of power in the collection of Octroi etc., and also in the construction of cement roads. In this respect, 4 Councillors have given a complaint to the Deputy Commissioner making specific charges against the President no action has been taken so far."

ಎಂದು ಇದರಲ್ಲಿ ಬರೆದಿದ್ದಾರೆ ಸದಸ್ಯರು ಏನು ಅಲಿಗೇಷನ್ ಕೊಟ್ಟಿದ್ದಾರೆ ಅದನ್ನು ರೆಕಮೆಂಡ್ ಮಾಡಿದ್ದಾರೆ ಅದನ್ನು ಇದರಲ್ಲಿ ಬರೆದಿದ್ದೇನೆ ಆ ರೆಕಮೆಂಡೇಷನ್ ಬಂದರೆ ಅದನ್ನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ ಎನ್ನುವುದನ್ನು ಇದರಲ್ಲಿ ಹೇಳಿದ್ದೇನೆ.

ಶ್ರೀ ಸಿ. ಬೈರೇಗೌಡ.—ಅಲಿಗೇಷನ್ ಕೊಟ್ಟಿದ್ದಾರಲ್ಲ ಅದರ ಬಗ್ಗೆ ಡಿವಿಜನಲ್ ಕಮಿಷನರ್ ತಮಗೆ ವರದಿಯನ್ನು ಕಳುಹಿಸಿರಬಹುದು. ಆ ವರದಿಯಲ್ಲಿ ಏನಿದೆ ಎನ್ನುವುದನ್ನು ದಯವಿಟ್ಟು ತಿಳಿಸಿ.

SRI H. D. DEVEGOWDA.—The Deputy Commissioner, Hassan, and the Divisional Commissioner, Mysore recommended for the dissolution of the present Council and hold elections ನಾನು ರುಜು ಹಾಕಿರುವ ಕಾಗದ ಇಲ್ಲೇ ಇದೆ. ಅವರು ಕೊಟ್ಟಿರುವ ಲೆಟರನ್ನು ಎನ್‌ಕ್ಲೋಸ್ ಮಾಡಿದೆ. ನಾನು ಕಾಲಿಂಗ್ ಅಟೆನ್‌ಷನ್ ಕಳುಹಿಸಿರುವುದರಲ್ಲಿ ನಿರ್ದಿಷ್ಟವಾಗಿ ಇದೆ. ಅದನ್ನು ತಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ.—ಡೆಪ್ಯುಟಿ ಕಮಿಷನರ್ ವರದಿಯಲ್ಲಿ ಏನಿದೆ ಎನ್ನುವುದನ್ನು ತಿಳಿಸಬೇಕು.

ಶ್ರೀ ಡಿ. ಕೆ. ನಾಯ್ಕರ್.—ನಾನು ಸ್ಟೇಟ್‌ಮೆಂಟಿನಲ್ಲಿ ವಿವರವಾಗಿ ತಿಳಿಸಿದ್ದೇನೆ.

Action will be taken after examining the recommendations made by the Deputy Commissioner and the Vigilance Commission. This is in respect of allegations made by four Council loss and efforts are being made to hold the elections to the Municipality.

2-00 P. M.

ಶ್ರೀ ಎಚ್. ಡಿ. ದೇವೇಗೌಡ.—೨೭-೭-೧೯೭೫ ನಿಮ್ಮ ಎಕ್ಸ್‌ಟೆಂಡೆಡ್ ಪೀರಿಯಡ್ ಮುಗಿಯಿತು. ನಂತರ ೬ ತಿಂಗಳ ಎಕ್ಸ್‌ಟೆಂಡೆಡ್ ಪೀರಿಯಡ್ ಸಹ ಮುಗಿಯಿತು. ಆದರ ಬಗ್ಗೆ ಆರ್ಡರ್ ಪ್ರತಿಯು ೧೨-೮-೧೯೭೫ರಲ್ಲಿ ಜಾರಿಯಲ್ಲಿ ಬಂದಿದೆ ಎಂದು ನೀವೇ ಹೇಳಿದ್ದೀರಿ. ಆದರ ಬಗ್ಗೆ ಆರ್ಡರ್ ಯಾವಾಗ ಬಂತು ?

ಶ್ರೀ ಡಿ. ಕೆ. ನಾಯ್ಕರ್.—ಅದು ಸರಿಯಲ್ಲ, ಜನವರಿ ೭೫ ರಲ್ಲಿ ೪ ವರ್ಷದ ಟರ್ಮ್ ಎಕ್ಸ್‌ಪೈರ್ ಆಯಿತು, ನಾವು ೬ ತಿಂಗಳು ಎಕ್ಸ್‌ಟೆಂಡ್ ಮಾಡಿದ್ದೆವು. ಆ ರೀತಿ ಎಕ್ಸ್‌ಟೆಂಡ್ ಆದ ಪೀರಿಯಡ್ ಸಹ ೨೨-೭-೧೯೭೫ಕ್ಕೆ ಮುಗಿಯಿತೆಂದು ಹೇಳಿದಾಗ, ಅಷ್ಟರೊಳಗೆ ಪೋಸ್ಟ್‌ಪೋನ್‌ಮೆಂಟ್ ಆಫ್ ಎಲೆಕ್ಷನ್ ಬಿಲ್ ಸಹ ಪಾಸಾಯಿತು. ಅದು ಈಗ ಬಂತು.

ಶ್ರೀ ಎಚ್. ಡಿ. ದೇವೇಗೌಡ.— ಅದು ಯಾವಾಗ ಬಂತು ?

ಶ್ರೀ ಡಿ. ಕೆ. ನಾಯ್ಕರ್.—ಅದು ೧೦-೮-೧೯೭೫ರಲ್ಲಿ ಜಾರಿಗೆ ಬಂತು.

ಶ್ರೀ ಎಚ್. ಡಿ. ದೇವೇಗೌಡ.—ಇದರ ಬಗ್ಗೆ ಡಪ್ಯುಟಿ ಕಮೀಷನರ್, ಹಾಗೂ ಡಿವಿಜನಲ್ ಕಮೀಷನರ್‌ವರ ರೆಕಮಂಡೇಷನ್ ಏನಿದೆ ? ಅವರು ಎಲೆಕ್ಷನ್ ಹೋಲ್ಡ್ ಮಾಡಬೇಕೆಂದೇನಾದರೂ ಬರೆದಿದ್ದಾರೆಯೇ ? ಅದನ್ನು ಯಾವಾಗ ಬರೆದರು ? ಆ ವಿಚಾರಗಳನ್ನು ಈ ಸಭೆಗೆ ತಿಳಿಸುತ್ತೀರಾ ? ಅಥವಾ ಅವರು ಆ ರೀತಿ ಬರದೆ ಇಲ್ಲವೇ ? ಎಲೆಕ್ಷನ್ ಬಗ್ಗೆ ಅವರು ಏನೋ ಬರೆದಿದ್ದಾರೆಂದು ಹೇಳಿದರು. ಇಲ್ಲದಿದ್ದರೆ ಎಲೆಕ್ಷನ್ ನಡೆಸಬೇಕೆಂದು ಜಿಲ್ಲಾಧಿಕಾರಿಗಳು ಬರದೇ ಇಲ್ಲವೇ? ಅದನ್ನಾದರೂ ಹೇಳುತ್ತೀರಾ? ಆ ರೀತಿ ಅವರು ಬರೆಯದಿದ್ದರೆ, ಇಲ್ಲ ಎಂದು ಹೇಳಿ, ಬರೆದಿದ್ದರೆ ಯಾವಾಗ ಬರೆದಿದ್ದರು ಎಂಬುದನ್ನಾದರೂ ಹೇಳಿ.

ಶ್ರೀ ಡಿ. ಕೆ. ನಾಯ್ಕರ್.—ಎಲೆಕ್ಷನ್ ಮಾಡುವಾಗ ಟೆರಿಟೋರಿಯಲ್ ಡಿವಿಜನ್ ಜಾಗ್ರತೆ ಮಾಡಿ ಎಂಬುದಾಗಿ ಸರ್ಕಾರ ಹೇಳುವುದು ಕರ್ತವ್ಯ. ಆದ್ದರಿಂದ ಜಿಲ್ಲಾಧಿಕಾರಿಯವರು ಸರ್ಕಾರಕ್ಕೆ ಬರೆಯಲಿ ಅಥವಾ ವಿಭಾಗಾಧಿಕಾರಿಗಳು ಬರೆಯಲಿ ಆದರೆ ಮೇಲೆ ಚುನಾವಣೆ ಮಾಡುತ್ತೇವೆಂದಲ್ಲ.

ಶ್ರೀ ಕೊಣಂದೂರು ಲಿಂಗಪ್ಪ.—ಮುನಿಸಿಪಾಲಿಟಿ ಎಂದರೆ ಬರೀ ಮಾನ್ಯ ಶ್ರೀ ನಾಯ್ಕರ್ ಅವರೊಬ್ಬರಿಗೂ ಅಥವಾ ಅವರ ಕೆಳಗಿನ ಅಧಿಕಾರಿಗಳಿಗೂ ಏನಾದರೂ ಸಂಬಂಧವಿದೆಯೇ ?

ಶ್ರೀ ಡಿ. ಕೆ. ನಾಯ್ಕರ್.—ಟೈಮ್ ಎಕ್ಸ್‌ಪೈರ್ ಆದಕೂಡಲೆ ಎಲೆಕ್ಷನ್ಸ್ ಮಾಡುವುದಕ್ಕಾಗಲ್ಲ. ೬ ತಿಂಗಳು ಎಕ್ಸ್‌ಟೆಂಡ್ ಮಾಡಿದಮೇಲೆ ; ಅದೀಗ ತಾನಾಗಿಯೇ ಮುಂದೆ ಹೋಗಿದೆ. ಅವರು ರೆಕಮೆಂಡೇಷನ್ ಮಾಡಿದರು ಎಂದು ನಾವು ಮಾಡಲಿಲ್ಲ. ಅಥವಾ ಅವರು ರೆಕಮೆಂಡೇಷನ್ ಮಾಡಲಿಲ್ಲ, ನಾವು ಮಾಡಿದ್ದೇವೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಇವತ್ತು ನಿಮ್ಮ ಪೋಸ್ಟ್‌ಪೋನ್‌ಮೆಂಟ್ ಆಫ್ ಎಲೆಕ್ಷನ್ ತಿದ್ದುಪಡಿ ಮಾಡಿದ್ದೀರಿ. ಆದರೆ ಎಮೆರ್ಜೆನ್ಸಿಯನ್ನು ಮುಂಗಿದ ತಕ್ಷಣ ಅದರ ಎಫೆಕ್ಟ್ ಮುಂಗಿಯುತ್ತದೆ. ಅಂದ ಮೇಲೆ ಈಗ ಎಮರ್ಜೆನ್ಸಿಯನ್ನು ಇಂಟರ್ನಲ್ ಹಾಗೂ ಎಕ್ಸ್‌ಟರ್ನಲ್ ಮುಂಗಿದು ಹೋಯಿತು. ಅಂದ ಮೇಲೆ ಈಗ ಎಲೆಕ್ಷನ್ ಯಾವಾಗ ಮಾಡುತ್ತೀರಾ ?

ಶ್ರೀ ಡಿ. ಕೆ. ನಾಯ್ಕರ್.—ಎಲೆಕ್ಷನ್ ನಾವು ಮಾಡಿಯೇ ಮಾಡುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ಅರಿಸೀಕೆರೆ ಮುನಿಸಿಪಲ್ ಪ್ರೆಸಿಡೆಂಟ್ ಅವರು ಈಗಾಗಲೇ ಸ್ಮಗ್ಲಿಂಗ್ ವ್ಯವಹಾರ ಮಾಡಿ ಸಾಕಷ್ಟು ಹಣ ಸಂಗ್ರಹಣೆ ಮಾಡಿದ್ದಾರೆ. ಅಲ್ಲದೆ ಅವರು ಅಲ್ಲಿ ವಸೂಲಿ ಬಾಜಿ ಮಾಡಿಕೊಂಡು ಅವರ ಎಕ್ಸ್‌ಟೆಂಷನ್‌ಗಾಗಿ ಅವಕಾಶ ಮಾಡಿಕೊಂಡಿದ್ದಾರೆ.

ಶ್ರೀ ಡಿ. ಕೆ. ನಾಯ್ಕರ್.—ಅದು ಸರಿಯಲ್ಲ.

SRI C. BYRE GOWDA.—May I know the date on which the Post ponement of Election Act 1975 was promulgated ?

SRI D. K. NAIKAR —No. LA. 50 LG 75, Bangalore, 13th August 1975 is deemed to have come into effect.

SRI C. BYRE GOWDA.—The Postponement of Election Act 1975 is deemed to have come into force from 10th July 1975.

ಅಧ್ಯಕ್ಷರು.—ಇವತ್ತು ಮಾನ್ಯ ಸಚಿವರಿಗೆ ಸಂಬಂಧಪಟ್ಟ ಡಿಮ್ಯಾಂಡ್ ಇದೆ ಆದ್ದರಿಂದ ಮಾನ್ಯ ಸದಸ್ಯರು ಈ ವಿಚಾರಗಳನ್ನೆಲ್ಲಾ ಆಗ ವಿಶದವಾಗಿ ಮಾತನಾಡಬಹುದು.

ಶ್ರೀ ಸಿ. ಬೈರೇಗೌಡ.—ಕೇವಲ ಒಂದು ತಿಂಗಳ ಅವಧಿಯಲ್ಲಿ ಅಕ್ರಮವಾಗಿ ಆ ಮುನಿಸಿಪಾಲಟಿಯ ಅಧ್ಯಕ್ಷರು ಅವರ ಟರ್ಮನ್ನು ಎಕ್ಸ್‌ಟೆಂಡ್ ಮಾಡಿ ಕೊಂಡಿದ್ದಾರೆ. ಅದಕ್ಕೆ ಯಾವ ಕಾನೂನಿನ ಬಲವೂ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಅದಕ್ಕೆ ಕಾನೂನಿನ ಬಲವಿಲ್ಲ. ದಂಡ್ಡಿನ ಬಲವಿತ್ತು. ?

(ii) *re*:—closure of five B. Ed. collegs from the current academic year

SRI C.V. VENKATARAYAPPA(Chikkballapura) —I call the Attention of the Minister for University Education to the order of Government to close down five B. Ed., Colleges from this academic year.